ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 2, Sep-Oct 2020, 155-158
©*IIMRD*, Mysuru
IIMRD JOURNALS
www.iimrd.com

# ಮೈಸೂರು ಒಡೆಯರ ಕಾಲದ ತಾಮ್ರ ಶಾಸನಗಳು: ಒಂದು ಅಧ್ಯಯನ

ಪ್ರಕಾಶ್ ಎಂ.[1]

**ಪೀಠಿಕೆ**

ಮೈಸೂರು ದಕ್ಷಿಣ ಭಾರತದ ಪ್ರಸಿದ್ಧ ಐತಿಹಾಸಿಕ ಸ್ಥಳ ಹಾಗು ಮೈಸೂರು ಸಂಸ್ಥಾನದ ರಾಜಧಾನಿ, ಮೈಸೂರನ್ನು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದು ಕರೆಯಲಾಗುತ್ತದೆ. ಮಹಿಷಪುರ, ಮಹಿಷ ಮಂಡಲ, ಅರಮನೆ ನಗರಿ ಎಂಬ ಹಲವು ನಾಮಾಂಕಿತಗಳಿಂದ ಕರೆಯಲಾಗಿದೆ. ಇಂತಹ ಮೈಸೂರಿನಲ್ಲಿ ಪ್ರಾಚೀನ ಕಾಲದಿಂದಲೂ ಅನೇಕ ರಾಜಮನೆತನಗಳು ಆಳ್ವಿಕೆ ನಡೆಸಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ನೊಳಂಬರು, ಪಶ್ಚಿಮ ಚಾಲುಕ್ಯರು, ಚೋಳರು, ಹೊಯ್ಸಳರು, ಚಂಗಾಳ್ವರು, ದೇವಗಿರಿ ಯಾದವರು, ಕಳಚೂರಿಗಳು, ವಿಜಯನಗರದ ಅರಸರು, ಮೈಸೂರು ಒಡೆಯರು, ಕಳಲೆ ಪ್ರಭುಗಳು, ಉಮ್ಮತ್ತೂರು ಪಾಳೇಗಾರರು, ಮೂಗೂರು ಪ್ರಭುಗಳು, ಕಾರುಗಳ್ಳಿ ಸಾಮಂತರು ಅಲ್ಲದೆ ಇನ್ನೂ ಅನೇಕ ಸಣ್ಣಪುಟ್ಟ ಮನೆತನಗಳು ಈ ಪ್ರಾಂತ್ಯದಲ್ಲಿ ತಮ್ಮದೆಯಾದ ಅಸ್ತಿತ್ವವನ್ನು ಹೊಂದಿ, ಈ ಮೇಲಿನ ಎಲ್ಲಾ ಮನೆತನಗಳು ತಮ್ಮದೇ ಆದ ರಾಜಾಜ್ಞೆಗಳನ್ನು ಶಾಸನಗಳ ಮೂಲಕ ಹೊರಡಿಸಿವೆ.

ಮೈಸೂರು ಒಡೆಯರು ದಾನ, ಧರ್ಮ, ತ್ಯಾಗ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಕಲೆ, ಸಾಹಿತ್ಯ ಮತ್ತು ವಾಸ್ತುಶಿಲ್ಪಕ್ಕೆ ಕೊಡುಗೆಗಳನ್ನು ನೀಡಿ ಅವುಗಳು ಶಾಶ್ವತವಾಗಿ ಉಳಿಯಬೇಕೆಂದು ರಾಜಾಜ್ಞೆಯಂತೆ ಶಾಸನಗಳಲ್ಲಿ ಅವುಗಳನ್ನು ನೀಡಿದ ದಿನಾಂಕ, ವಿವರ, ಕಾಲ, ಕೆತ್ತನೆ ಮಾಡಿದ ಶಿಲ್ಪಿ, ಅದರ ಕರ್ತೃ ಮುಂತಾದವುಗಳನ್ನು ಬೂರ್ಜಪತ್ರ, ತಾಳೆಗರಿ, ಮರದ ತೊಗಟೆ ಮುಂತಾದವುಗಳಲ್ಲಿ ಬರೆಸುತ್ತಿದ್ದರು. ಕಾಲನಂತರ ಶಾಸನಗಳನ್ನು ಕಲ್ಲುಗಳ ಮೇಲೆ, ಲೋಹಗಳ ಮೇಲೆ ಜನರಿಗೆ ತಿಳಿಯುವಂತೆ ಬರೆಸುತ್ತಿದ್ದರು. ಹೀಗೆ ಬರೆಸಿದ ಶಾಸನಗಳಲ್ಲಿ ಅತ್ಯಂತ ಪ್ರಮುಖವಾದುದೆಂದರೆ ತಾಮ್ರ ಶಾಸನ.

ಮೈಸೂರು ಪ್ರಾಂತ್ಯದಲ್ಲಿ ಆಳ್ವಿಕೆ ನಡೆಸಿದ ಗಂಗರ ಕಾಲದ ಶಾಸನಗಳು ಕರ್ನಾಟಕದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದೊರೆತಿವೆ. ಈ ಪ್ರಾಂತ್ಯದಲ್ಲಿ ಮೈಸೂರು ಸಂಸ್ಥಾನದ ಕಾಲದ ಶಾಸನಗಳು ಕೊನೆಯ ಘಟ್ಟದವು. ಮೈಸೂರು ಸಂಸ್ಥಾನವನ್ನು ಆಳ್ವಿಕೆ ಮಾಡಿದ ಒಡೆಯರ ಕಾಲದ ಶಾಸನಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು. ಅವುಗಳೆಂದರೆ, ತಾಮ್ರ ಶಾಸನ, ಶಿಲಾ ಶಾಸನ ಮತ್ತು ಲೋಹ ಶಾಸನ. ಈ ಮೂರು ಪ್ರಕಾರದ ಶಾಸನಗಳು ಒಂದಕ್ಕೊಂದು ಭಿನ್ನವಾಗಿರುವವು. ತಾಮ್ರ ಶಾಸನವು ಅತ್ಯಂತ ಕೊನೆಯ ಸ್ಥಾನವನ್ನು ಪಡೆದ ಶಾಸನವೆಂದು ಹೇಳಬಹುದು.

---

[1] *ಸಂಶೋಧಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.*

ಮೈಸೂರು ಒಡೆಯರು ವಿಜಯನಗರ ಅರಸರ ತಾಮ್ರ ಶಾಸನಗಳ ರಚನೆಯನ್ನೇ ಅನುಸರಿಸಿದರು. ಇವರು ಶಾಸನಗಳನ್ನು ಹಾಕಿಸಿದ ಹಲಗೆಗಳು ಗಾತ್ರದಲ್ಲಿ ದೊಡ್ಡವು ಹಾಗೂ ಆಕಾರದಲ್ಲಿ ಹೆಚ್ಚು ಸುಧಾರಣೆಗಳಾದವು. ಆರಂಭದ ತಾಮ್ರ ಶಾಸನಗಳಲ್ಲಿ ನಂದಿನಾಗರೀ ಲಿಪಿಯನ್ನು ಬಳಸಿದರು. ನಂತರ ಕಾವ್ಯ ಶೈಲಿಯಲ್ಲಿ ಸಂಸ್ಕೃತದಲ್ಲಿ ರಚಿಸಿ ಅದನ್ನು ಕನ್ನಡದ ಗದ್ಯದಲ್ಲಿ ವಿವರಿಸಿದರು. ಮೈಸೂರು ಒಡೆಯರ ತಾಮ್ರ ಶಾಸನಗಳು ಬಹುತೇಕ ದತ್ತಿಬಿಟ್ಟ ಶಾಸನಗಳಾಗಿವೆ. ಈ ಶಾಸನಗಳನ್ನು ದೊಡ್ಡದೇವರಾಜ, ಚಿಕ್ಕದೇವರಾಜ, ಕಂಠೀರವ ನರಸರಾಜ, ಒಂದನೇ ಕೃಷ್ಣರಾಜ, 2ನೇ ಕೃಷ್ಣರಾಜ ಇವರ ಹಲವಾರು ತಾಮ್ರ ಶಾಸನಗಳು ದೊರೆತಿದ್ದು, ಇವುಗಳು ಒಡೆಯ ವಂಶಾವಳಿಯನ್ನು ತಿಳಿಸುತ್ತವೆ.

ತಾಮ್ರ ಶಾಸನಗಳಲ್ಲಿ ಮೊದಲು ವಿಷ್ಣು ಬ್ರಹ್ಮರಿಂದ ಆರಂಭಿಸಿ ಚಂದ್ರನ ಮೂಲಕ ಯದುರಾಯನ ಮೂಲಕ ಪೌರಾಣಿಕ ವಂಶಾವಳಿ ತಿಳಿಸುತ್ತದೆ. ಯದುರಾಯನ ವಂಶಸ್ಥರು ಮೊದಲು ದ್ವಾರಕೆಯಲ್ಲಿದ್ದು, ನಂತರ ಕರ್ನಾಟಕಕ್ಕೆ ಬಂದು ನೆಲೆಸಿ ಇಲ್ಲಿನ ಸೌಂದರ್ಯಕ್ಕೆ ಮನಸೋತು ಇಲ್ಲಿಯೇ ನೆಲೆಸಿದರು. 'ಮಹಿಷಾಸರು' ಇವರ ರಾಜಧಾನಿಯಾಗಿತ್ತೆಂದು ತಿಳಿಯುವುದಲ್ಲದೆ ಮುಂದೆ ಬೆಟ್ಟದ ಚಾಮರಾಜನಿಂದ ಆರಂಭಿಸಿ ವಂಶಾವಳಿಯನ್ನು ವಿವರಿಸುತ್ತವೆ. ಇವರ ಮೊದಲ ಶಾಸನಗಳು ವಿಜಯನಗರದ ಅರಸರ ಸಾರ್ವಭೌಮತ್ವವನ್ನು ಒಪ್ಪಿಕೊಂಡಿದ್ದವು. ನಂತರದ ಶಾಸನಗಳಲ್ಲಿ ಅವರು ಸ್ವತಂತ್ರವಾಗಿ ಆಳ್ವಿಕೆ ನಡೆಸಿದರೆಂದು ತಿಳಿದುಬರುತ್ತದೆ.

ಚಿಕ್ಕದೇವರಾಜ ಒಡೆಯರು ಮತ್ತು ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿದ್ದಂತಹ ತಿರುಮಲಾರ್ಯ ಅನೇಕ ತಾಮ್ರ ಶಾಸನಗಳನ್ನು ಹಾಕಿಸಿದನು. ಈ ಶಾಸನಗಳು ಕಾವ್ಯಮಯವಾಗಿದ್ದು, ಸಂಸ್ಕೃತ ಮತ್ತು ಕನ್ನಡ ಎರಡರಲ್ಲೂ ಸೊಗಸಾಗಿವೆ. ಈ ಶಾಸನಗಳ ಸಾಲಿನಿಂದ 'ಮಿತ್ರಾವಿಂದ ಗೋವಿಂದ' ನಾಟಕಕ್ಕೆ ಅನೇಕ ಪದಗಳನ್ನು ಸಿಂಗಾರಾರ್ಯ ಅನೇಕ ಪದಗಳನ್ನು ಆರಿಸಿಕೊಂಡಿದ್ದಾನೆ. 'ಅಪ್ರತಿಮವೀರ ಚರಿತೆ'ಯಲ್ಲಿ ಈ ಶಾಸನಗಳಲ್ಲಿನ ಹಲವು ಪದ್ಯಗಳಿವೆ.

ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ರಚನೆಗೊಂಡ ಅನೇಕ ಶಾಸನಗಳು ಪ್ರತಿಗಳು ಅರಮನೆಯಲ್ಲಿದ್ದವು. ಮೈಸೂರನ್ನು ಆಳ್ವಿಕೆ ಮಾಡಿದ ಟಿಪ್ಪು ಸುಲ್ತಾನ್ ಅರಮನೆಯಲ್ಲಿ ಆ ಶಾಸನಗಳನ್ನು ನಾಶ ಮಾಡಿದನೆಂದು ತಿಳಿದುಬರುತ್ತದೆ. ಈ ಶಾಸನಗಳಲ್ಲಿ ಚಿಕ್ಕದೇವರಾಜ ಒಡೆಯರು ದಾಳಿ (ಅನ್ಯರಾಜ್ಯಗಳ ಮೇಲೆ) ಮಾಡಿದ ಯುದ್ಧಗಳು, ಅವರು ಮಾಡಿದ ದಾನಧರ್ಮಗಳು ಮುಂತಾದ ಹಲವು ವಿಚಾರಗಳು ಈ ಶಾಸನಗಳಲ್ಲಿ ತಿಳಿದುಬರುತ್ತವೆ. ಈ ತಾಮ್ರ ಶಾಸನಗಳನ್ನು ಹಾಕಿಸಿರುವ ಮುಖ್ಯ ಉದ್ದೇಶ ಅಗ್ರಹಾರಗಳನ್ನು ಸ್ಥಾಪಿಸಿ, ಹಲವು ವೃತ್ತಿಗಾಗಿ ವಿಂಗಡಿಸಿ ಹಲವು ಗ್ರಾಮಗಳನ್ನು ದತ್ತಿ ಬಿಟ್ಟಿರುವುದು ಕಂಡುಬರುತ್ತದೆ. ದಳವಾಯಿಯಾದ ಕಳಲೆಯ ದೇವರಾಜಯ್ಯ 14 ಗ್ರಾಮಗಳಿಂದ ಕೂಡಿದ ರಾಮಚಂದ್ರಪುರ ಅಗ್ರಹಾರವನ್ನು ನಿರ್ಮಿಸಿದ ವಿಷಯವನ್ನು ತಿಳಿಸುವ ಶಾಸನವೊಂದು ತಿರುಮಕೂಡಲು ನರಸೀಪುರದಲ್ಲಿ ದೊರೆತಿದೆ.

ಚಿಕ್ಕದೇವರಾಜ ಒಡೆಯರ ನಂತರದ ಶಾಸನಗಳಲ್ಲಿ ಶ್ರೀಮನ್ಮಹಾರಾಜಾಧಿರಾಜ, ರಾಜಪರಮೇಶ್ವರ, ಪ್ರೌಢಪ್ರತಾಪನ ರತಿಯ ವೀರನರಪತಿ ಮುಂತಾದ ಬಿರುದುಗಳು ಕಂಡುಬರುತ್ತವೆ.

ಚಿಕ್ಕದೇವರಾಜ ಒಡೆಯರು ಮಳವಳ್ಳಿ ತಾಲೂಕಿನ ಮಾರೇಹಳ್ಳಿಯ ಲಕ್ಷ್ಮಿನರಸಿಂಹ ದೇವಾಲಯದ ಮುಂಭಾಗದಲ್ಲಿ ಶೃಂಗಾರ ಕೊಳವೆಂಬ ಕೊಳವೊಂದನ್ನು ಕಟ್ಟಿಸಿದ ವಿಷಯವನ್ನು ದೇವಾಲಯದಲ್ಲಿರುವ ಶಾಸನ ತಿಳಿಸುತ್ತದೆ. ಈ ಶಾಸನವು ಮೊದಲು ಸಂಸ್ಕೃತದಲ್ಲಿ ಆರಂಭಗೊಂಡು ಕೊನೆಯಲ್ಲಿ ಕನ್ನಡದಲ್ಲಿ ವಿಷಯವನ್ನು ಪೂರ್ಣಗೊಳಿಸುತ್ತದೆ. ಕಲ್ಲಂಬಾಳಿನ ಹೊಯ್ಸಳರ ಕಾಲದ ದೇವಾಲಯವನ್ನು ಮೈಸೂರು ಒಡೆಯರು ಜೀರ್ಣೋದ್ಧಾರವನ್ನು ಮಾಡಿದ ವಿಷಯವನ್ನು ತಿಳಿಸುವ ಶಾಸನ ಆರಂಭದಲ್ಲಿ 'ವನಾರ್ಥವೀನ' ಎಂದು ರಂಘುವಂಶದ ಪ್ರಸಿದ್ಧ ಶ್ಲೋಕವನ್ನು ಕೊಟ್ಟಿರುವುದು ವಿಶೇಷವಾದುದಾಗಿದೆ.

ಕಂಠೀರವ ನರಸರಾಜ ಒಡೆಯರ ಕಾಲದ ಮೂರು ಶಾಸನಗಳಲ್ಲಿ ಒಂದು ಶಾಸನ 'ಕಂಠೀರಾಯ' ಎಂಬ (ಹಣ) ಪಣವನ್ನು ಟಂಕಿಸುವುದನ್ನು ತಿಳಿಸುತ್ತದೆ. ಕಂಠೀರವ ನರಸರಾಜ ಒಡೆಯರ ಕಾಲದ ಮತ್ತೆರಡು ಶಾಸನಗಳು ಕಾಶಿ, ಗಯಾ, ಪ್ರಯಾಗಗಳಲ್ಲಿ ಧಾನಧರ್ಮಕ್ಕಾಗಿ ರಾಜನು ದತ್ತಿ ಬಿಟ್ಟಿರುವ ಹಲವು ವಿಷಯವನ್ನು ತಿಳಿಸುತ್ತದೆ. 1818ರಲ್ಲಿ ಮೈಲಿಬೇನೆ ಮತ್ತು ಕಾಲರ ರೋಗ ಹರಡಿದಾಗ ನಂಜಮ್ಮ ಎಂಬ ಕನ್ಯೆಯ ಮೇಲೆ ಕೊಲ್ಲಾಪುರದ ಮಹಾಲಕ್ಷ್ಮಿ ಮತ್ತು ಉಜ್ಜೈನಿಯ ಮಹಾಕಾಳಿ ದೇವಿಯು ಆವಿರ್ಭವಿಸಿ ಎಲ್ಲಾ ವರ್ಗದವರಿಗೂ ರೋಗದ್ಯುಪದ್ರವಗಳನ್ನು ಪರಿಹರಿಸಿದ ವಿಷಯವನ್ನು ಕನ್ನಂಬಾಡಿಯ ಶಾಸನವು ತಿಳಿಸುತ್ತದೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ನೂರಾರು ಶಾಸನಗಳು ಮೂರ್ತಿಗಳ ಪೀಠದ ಮೇಲೆ, ಬಂಡೆಗಳ ಮೇಲೆ ಮತ್ತು ವಿಗ್ರಹಗಳ ಮೇಲೆ ಕೆತ್ತಿಸಿರುವುದು ಕಂಡುಬರುತ್ತದೆ. ಮೈಸೂರು ಪ್ರಾಂತ್ಯದ ವ್ಯಾಪ್ತಿಯ ನಂಜನಗೂಡು, ತಿರುಮಕೂಡಲು ನರಸೀಪುರ ತಾಲೂಕು ಹಲವು ಕಡೆಗಳಲ್ಲಿ ದೇವಾಲಯಗಳಿಗೆ ನೂರಾರು ಲೋಹ ಮತ್ತು ಶಿಲಾ ಮೂರ್ತಿಗಳನ್ನು ಮಾಡಿಸಿರುವುದಲ್ಲದೆ ಅವುಗಳ ಮೇಲೆ ರಾಜ ಮತ್ತು ಶಿಲ್ಪಿಯ ಹೆಸರುಗಳು ಕಂಡುಬರುತ್ತವೆ.

ಕ್ರಿ.ಶ.11ನೇ ಶತಮಾನದಲ್ಲಿ ರಚಿತವಾದ ತಿರುಮಕೂಡಲು ನರಸೀಪುರ ತಾಲೂಕಿನ ಗ್ರಾಮಸ್ಥರೊಬ್ಬರಲ್ಲಿದ್ದ ತಾಮ್ರ ಶಾಸನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಸಂಸ್ಕೃತದಲ್ಲಿ 3 ತಾಮ್ರ ಫಲಕಗಳನ್ನು ಎರಡು ಕಡೆ ಅಂದರೆ ಒಂದನೇ ಮತ್ತು 3ನೇ ಫಲಕದಲ್ಲಿ ರಾಜನು ಅನೇಕ ಅಗ್ರಹಾರಗಳನ್ನು ಮತ್ತು ನಂಜನಗೂಡಿನ ನಂಜುಂಡೇಶ್ವರ ದೇವಾಲಯಕ್ಕೆ ಭೂಮಿಯನ್ನು ಉಂಬಳಿ ಬಿಟ್ಟಿರುವುದನ್ನು ಈ ಶಾಸನವು ತಿಳಿಸುತ್ತದೆ. ಇದೇ ರೀತಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಕೃಷ್ಣರಾಜನಗರ ತಾಲೂಕಿನ ಹನಸೋಗೆ ಗ್ರಾಮದ ಶೇಷಗಿರಿಚಾರ್ಯರ ವಶದಲ್ಲಿದ್ದ ತಾಮ್ರ ಶಾಸನದಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರು ಹಳ್ಳಿಗಳಿಗೆ ಮೇರೆಗಳನ್ನು ಗುರುತಿಸಲು 12 ಸಣ್ಣ ಹಳ್ಳಿಗಳನ್ನು ಮತ್ತು ಅಗ್ರಹಾರಗಳಿಗೆ ಪೂರ್ವ ನಾಯಕರಾಗಿ ಮಾಡಿ ಕೃಷ್ಣರಾಜ ಸಮುದ್ರ ಎಂದು ಬ್ರಾಹ್ಮಣನ ಹೆಸರಿದ್ದ ಈ ಶಾಸನವನ್ನು ಕ್ರಿ.ಶ.1761 ಆಗಸ್ಟ್ 24ರಂದು ಬರೆಸಿದರೆಂದು ತಿಳಿದುಬರುತ್ತದೆ.

ತಿರುಮಕೂಡಲು ನರಸೀಪುರ ತಾಲೂಕಿನ ಸೋಸಲೆಯ ವ್ಯಾಸರಾಜ ಮಠದ 8ನೇ ತಾಮ್ರ ಶಾಸನದಲ್ಲಿ ವ್ಯಾಸರಾಜನು ಗೋಪಾಲಕೃಷ್ಣ ದೇವರಿಗೆ ವರ್ತಕರ ಆದಾಯವನ್ನು ವಿಧಿಸಲು ವೆದಗರ ವಾಂಬುದಿ ಸಿಂಹನಿಗೆ 20 ರೊಕ್ಕಗಳನ್ನು ಮತ್ತು 10 ರೊಕ್ಕಗಳನ್ನು ವೈಯಕ್ತಿಕವಾಗಿ ವಿಧಿಸಿದ್ದರೆಂಬುದನ್ನು

ತಿಳಿಸುತ್ತದೆ. ಈ ಶಾಸನವು ತಮಿಳು ಭಾಷೆಯಲ್ಲಿದ್ದು, 1631ರಲ್ಲಿ ಬರೆಸಿದರೆಂದು ಹೇಳಲಾಗಿದೆ. 19ನೇ ಶತಮಾನದಲ್ಲಿ ಮೈಸೂರು ತಾಲೂಕಿನಲ್ಲಿರುವ ಶಾಂತೀಶ್ವರ ಬಸದಿಯ ಸುಕನಾಸಿಯ ಬಾಗಿಲಿನ ಹಿತ್ತಾಳೆ ತಗಡಿನ ಮೇಲೆ ಬರೆಸಿರುವ ಶಾಸನವು ಸಂಸ್ಕೃತದಲ್ಲಿ ತನ್ನ ಮೋಕ್ಷ ಸಾಧನೆಗಗಾಗಿ ಮರಿನಾನ ಜೈನ ಬಸದಿಯನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ.

**ಉಪಸಂಹಾರ**

ಮೈಸೂರು ಸಂಸ್ಥಾನವನ್ನು ಆಳ್ವಿಕೆ ಮಾಡಿದ ಒಡೆಯರು ಮೈಸೂರು ಪ್ರಾಂತ್ಯದ ಅಧಿನದಲ್ಲಿದ್ದ ಪ್ರದೇಶಗಳಲ್ಲಿ ಹಲವಾರು ಅಗ್ರಹಾರ, ದೇವಾಲಯ ಮತ್ತು ಧಾರ್ಮಿಕ ಕ್ಷೇತ್ರಗಳಿಗೆ ಅಪಾರವಾದ ದತ್ತಿಯನ್ನು ಬಿಟ್ಟಿರುವ ವಿಷಯವು ನಮಗೆ ಶಾಸನಗಳಿಂದ ತಿಳಿದುಬರುತ್ತದೆ. ಮೈಸೂರು ಒಡೆಯರ ಬಗ್ಗೆ ಇನ್ನೂ ಅನೇಕ ಪ್ರಮಾಣದ ವಿಷಯಗಳು ಮರೆಮಾಚಿದ್ದು, ಸಂಶೋಧನೆಯನ್ನು ಕೈಗೊಂಡರೆ ಪೂರ್ಣ ಪ್ರಮಾಣದ ಹೊಸ ಹೊಸ ವಿಚಾರಗಳು ತಿಳಿದುಬರುತ್ತವೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

## ಪರಾಮರ್ಶನ ಗ್ರಂಥಗಳು


- ಚಿದಾನಂದ ಮೂರ್ತಿ. ಎಂ. (1966). ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, (ಕ್ರಿ.ಶ.450–ಕ್ರಿ.ಶ.1150) ಮೈಸೂರು. ವಿ.ವಿ., ಮೈಸೂರು.
- ಕನ್ನಡ ವಿಷಯ ವಿಶ್ವಕೋಶ. (1975). ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು.ವಿ.ವಿ., ಮೈಸೂರು.
- ನಾಗರಾಜನ್. ಹೆಚ್.ಎಂ. (1998). ತಿರುಮಕೂಡಲು ನರಸೀಪುರ ತಾಲೂಕಿನ ಶಾಸನಗಳ ಒಂದು ಪರಿಚಯ, ಮೈಸೂರು.
- ರೈಸ್.ಬಿ.ಎಲ್. ಎಪಿಗ್ರಫಿಯಾ ಕರ್ನಾಟಿಕ, ಪುರಾತ್ವ ಇಲಾಕೆ, ಮೈಸೂರು. ಸಂ.3–6.
- Rice B L. (1897). Mysore: A Gazetteer Compiled for Government, Mysore.
- ಶ್ರೀಧರ್. ಸಿ.ಎ. (2010). ಮೈಸೂರು ಒಡೆಯರು ಮತ್ತು ಕರ್ನಾಟಕ ಸಂಸ್ಕೃತಿ, ಸಂಸ್ಕೃತಿ ಬುಕ್ ಪ್ಯಾರಡೈಸ್, ಮೈಸೂರು.
- ತಿಪ್ಪೇರುದ್ರಸ್ವಾಮಿ. ಎಚ್. (1968). ಕರ್ನಾಟಕದಲ್ಲಿ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.